## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂವತ್ತೆಂಟನೆಯ ಪದ್ಯ

ಇದು ಸರಿ, ಆದರೆ, ಹೀಗೆ ಕರ್ಣನಿಗೆ ಅವನ ಪೂರ್ವಕರ್ಮದ ಫಲವನ್ನು ನೀಡಲೋಸುಗ ಅವನನ್ನು ಪಾಂಡವಪಾಳೆಯಕ್ಕೆ ಬಾ ಎಂದು ಕರೆದದ್ದು ಹೇಗೆ ಸರಿಯಾದೀತು ? ಎಂಬ ಪ್ರಶ್ನೆಯನ್ನು ಮಾಡಿಕೊಂಡು ದಾಸರು ಅದಕ್ಕೆ ಉತ್ತರವನ್ನು ನೀಡುತ್ತಾರೆ –

**ಕೊಲ್ಲ ಬಗೆದವನಾಗಿ ನೀ ಹಗೆ-**
**ಯಲ್ಲಿ ಸಖ್ಯವ ಬೆಳಸಲದು ಹಿತ-**
**ವಲ್ಲ ನಿನ್ನಯ ಗುಣವ ಬಲ್ಲವರಿಲ್ಲ ಯದುಕುಲದಿ ।**
**ಗೊಲ್ಲನಾರಿಯರೊಳು ಪ್ರವರ್ತಕ-**
**ನಲ್ಲವೇ ಭಾವಿಸಲು ಲೋಕದೊ-**
**ಳೆಲ್ಲರೂ ಸರಿ ನಿನಗೆ ರಕ್ಷಿಸು ನಮ್ಮನನವರತ ॥ ೩೮ ॥**

'ಕೊಲ್ಲ ಬಗೆದವನಾಗಿ' ಕರ್ಣನನ್ನು ಕೊಲ್ಲ ಬಯಸಿದವನಾಗಿ

‘ನೀ ಹಗೆಯಲ್ಲಿ ಸಖ್ಯವ ಬೆಳೆಸಲದು’ ದ್ರೌಪದಿಯ ವಸ್ತ್ರಾಪಹರಣ, ಪಾಂಡವರ ರಾಜ್ಯಾಪಹರಣ ಮುಂತಾದ ದುರ್ಯೋಧನನ ಎಲ್ಲ ಕೃತ್ಯಗಳಿಗೆ ಬೆಂಬಲವಾಗಿ ನಿಂತು ಪಾಂಡವರಿಗೆ ಶತ್ರುವಾದ ಕರ್ಣನ ಸಖ್ಯವನ್ನು ಪಾಂಡವರೊಂದಿಗೆ ಬೆಸೆಯುವದು
‘ಹಿತವಲ್ಲ’ ಪಾಂಡವರಿಗೆ ಹಿತವಾದುದಲ್ಲ, ಯುಕ್ತವಾದುದಲ್ಲ. ಎನ್ನುವದು ಪ್ರಶ್ನೆ.
ಅದಕ್ಕೆ ಉತ್ತರ. ‘ನಿನ್ನಯ ಗುಣವ ಬಲ್ಲವರಿಲ್ಲ ಯದುಕುಲದಿ’ ಯದುಕುಲ ಒಂದು ದೃಷ್ಟಾಂತ ಮಾತ್ರ. ಜಗತ್ತಿನಲ್ಲಿ ಯಾರಿಗೂ ನಿನ್ನ ಪೂರ್ಣಗುಣಗಳನ್ನು ತಿಳಿದವರಿಲ್ಲ ಎಂದರ್ಥ.

ಸ್ಪಷ್ಟವಾಗಿ ‘ಬಲ್ಲವರಿಲ್ಲ ಜಗದೊಳಗೆ’ ಎಂದು ಹೇಳದೇ ಯದುಕುಲದಿ ಎಂದು ಹೇಳಲು ಕಾರಣ, ಪರಮಾತ್ಮನನ್ನು ಬಾಂಧವನನ್ನಾಗಿ ಪಡೆದು ನೂರುವರ್ಷಗಳ ಅವನ ಸಾಂಗತ್ಯಸುಖವನ್ನು ಅನುಭವಿಸಿದ ದೇವತಾಪುರುಷರಾದ ಯದುಕುಲದವರೇ ಅವನನ್ನು ಪೂರ್ಣ ತಿಳಿಯಲಾಗಲಿಲ್ಲ, ಇನ್ನು ಉಳಿದವರದೇನು ಪಾಡು ಎಂಬ ಮಾತನ್ನು ತಿಳಿಸುವದು.

ಕನಕದಾಸರು ನೀಡುತ್ತಿರುವ ಉತ್ತರ ಹೀಗಿದೆ. ಈ ರೀತಿ ಪ್ರಶ್ನೆ ಮಾಡುವವರು 'ನಿನ್ನಯ ಗುಣವ' ಜಗತ್ತಿನ ಸಕಲ ಪದಾರ್ಥಗಳಲ್ಲಿಯೂ ಸಮನಾಗಿ ಯಾರನ್ನೂ ದ್ವೇಷಿಸದೇ ಯಾರನ್ನೂ ಪ್ರೀತಿಸದೆ ಇರುವವನು. ನಿನ್ನನ್ನು ನಿಂದಿಸುವವರು "ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ" ಎಂಬ ನಿನ್ನ ಗುಣವನ್ನು ಬಲ್ಲವರಲ್ಲ.

ಅದನ್ನೇ ವಿವರಿಸುತ್ತಾರೆ, ಯದುಕುಲದಿ ಶ್ರೇಷ್ಠವಾದ ಯದುಕುಲದಲ್ಲಿ ಅವತರಿಸಿದ ಅಪ್ರಾಕೃತನಾದ ಚಿನ್ಮಯನಾದ ನಿತ್ಯತೃಪ್ತನಾದನ ನಾರಾಯಣ ನೀನು. ಅಷ್ಟಾದರೂ ನಿನ್ನ ರೂಪ ಗುಣ ಸೌಂದರ್ಯ ಯಾವುದಕ್ಕೂ ಸಾಟಿಯಲ್ಲದ ಹಾಲು ಮೊಸರು ಮಾರಿ ಬದುಕುವ ಅತೀ ಸಾಮಾನ್ಯರಾದ ಗೊಲ್ಲನಾರಿಯರೊಳು ಪ್ರವರ್ತಕನಲ್ಲವೇ ನೀನು? ಗೋಪಿಕಾಸ್ತ್ರೀಯರನ್ನು ಕೂಡಿದವನಲ್ಲವೇ ನೀನು ? ನಿನ್ನ ಅಂಗಸಂಗವನ್ನು ಪಡೆಯುವ ಯೊಗ್ಯತೆ ಅಪ್ರಾಕೃತಳಾದ ಚಿನ್ಮಯಳಾದ ಪರಾಶಕ್ತಿಯನಾದ ಮಹಾಲಕ್ಷ್ಮಿದೇವಿಗೆ ಮಾತ್ರ. ಉಳಿದವರೆಗೆಲ್ಲಿಯದು. ಅಂತಹುದರಲ್ಲಿ ನಿನ್ನ

ಅಂಗಸಂಗವನ್ನು ಬಯಸಿದ ಆ ಗೋಪಿಕಾಸ್ತ್ರೀಯರಿಗೆ ಅಂಗಸಂಗವನ್ನು ನೀಡಿದೆ. ಮಹಾಲಕ್ಷ್ಮೀದೇವಿಯನ್ನೇ ಸುಖಕ್ಕಾಗಿ ಆಶ್ರಯಿಸದ ನಿತ್ಯತೃಪ್ತ ಸ್ವರಮಣ ನೀನು. ಅಂತಹುದರಲ್ಲಿ ಆ ಗೋಪಿಕೆಯರಿಂದ ಸುಖಪಟ್ಟವನ ಹಾಗೆ ವರ್ತಿಸಿ ಅವರನ್ನು ಸಂತೋಷಪಡಿಸಿದೆ.

‘ಭಾವಿಸಲು’ ಈ ರೀತಿಯ ನಿನ್ನ ವ್ಯಾಪಾರಗಳನ್ನು ವಿಮರ್ಶೆ ಮಾಡಲು ಸಿದ್ಧವಾಗುವ ತತ್ವ  ನಿನಗೆ ಲೋಕದೊಳೆಲ್ಲರೂ ಸರಿ ಎಂದು. ಪರಮಾತ್ಮ ಯಾವ ಜೀವನ ಮೇಲೂ ಪ್ರೇಮ ಮಾಡುವದಿಲ್ಲ ಯಾವ ಜೀವನನ್ನೂ ದ್ವೇಷಿಸುವದಿಲ್ಲ. ಆಯಾಯ ಜೀವನ ಸ್ವಭಾವಕ್ಕನುಗುಣವಾಗಿ ಫಲ ನೀಡುತ್ತಾನೆ. ಅಷ್ಟೇ. ಕಾರಣ, ಜೀವರನ್ನು ಪ್ರೀತಿಸುವದರಿಂದ ದ್ವೇಷಿಸುವದರಿಂದ ಪರಮಾತ್ಮನಿಗಾಗ ಬೇಕಾದ್ದೇನೂ ಇಲ್ಲ. ಅವನು ಸರ್ವರಲ್ಲಿಯೂ ಸಮನೇ. ಆದ್ದರಿಂದ ದಾಸರು ನುಡಿದರು  ರಕ್ಷಿಸು ನಮ್ಮನನವರತ. ಸ್ವಾಮಿನ್, ನನ್ನ ಸ್ವಭಾವಭೂತವಾದ ಜ್ಞಾನಾನಂದಮಯವೇದ ದೇಹವನ್ನು ನನಗೆ ಕರುಣಿಸು. ಅಸ್ವಾಭಾವಿಕವಾದ ಈ ಕರ್ಮ ಕಾಮ ಅವಿದ್ಯೆಗಳ ಬಂಧನವನ್ನು

ಕಡಿದು ಹಾಕು. ಅನವರತವೂ ಮೋಕ್ಷದಲ್ಲಿ ಆನಂದವನ್ನಿತ್ತು ನಮ್ಮನ್ನು ರಕ್ಷಿಸು ॥ ೩೮ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

ಇದರ ಉಪನ್ಯಾಸದಲ್ಲಿ ವಿವರಣೆ ಉತ್ತಮವಾಗಿ ಮೂಡಿಬಂದಿದೆ. ಕೇಳಿ. VNU433